ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಅವರನ್ನು ಸರಕಾರ ಸಕ್ರಮಗೊಳಿಸಿ ಇತ್ತೀಚಿನ ಸಚಿವ ಸಂಪುಟದಲ್ಲಿ ಆದೇಶ ಹೊರಡಿಸಿದ್ದೇವೆ. ಅದರಲ್ಲಿ 176 ಪಶು ವೈದ್ಯರು ಮಾತ್ರ ಈ ರಾಜ್ಯದಲ್ಲಿ ಕೊರತೆ ಇದ್ದಾರೆ. ಅದನ್ನು ತುಂಬುವುದಕ್ಕೆ ಸರಕಾರ ಕ್ರಮ ಕೈಗೊಂಡಿದೆ.

ಶ್ರೀ ಕೆ. ಪ್ರತಾಪ ಚಂದ್ರಶೆಟ್ಟಿ : ಕೆಲವು ಪಶು ಚಿಕಿತ್ಸಾ ಕೇಂದ್ರಗಳಿಗೆ ಹುದ್ದೆ ಮಂಜೂರಾತಿ ಆಗಬೇಕಾಗಿರುವುದು ಎಷ್ಟು? ಎಷ್ಟು ಸಿಬ್ಬಂದಿ ವರ್ಗದವರ ಕೊರತೆ ಇದೆ. ವೈದ್ಯರು ಮತ್ತು ಇತರ ಸಿಬ್ಬಂದಿ ವರ್ಗದವರು ಸೇರಿ ಎಷ್ಟು ಹುದ್ದೆಗಳು ಬೇಕು. ತಾತ್ಕಾಲಿಕವಾಗಿ ಕೆಲಸ ಮಾಡುತ್ತಿರುವ 254 ಜನರನ್ನು ಖಾಯಂ ಮಾಡುತ್ತೀರೋ?

ಅಧ್ಯಕ್ಷರು : ಆಗಲೇ ಹೇಳಿದರಲ್ಲ ಸಚಿವ ಸಂಪುಟದ ನಿರ್ಣಯವಾಗಿದೆ ಅವರನ್ನು ಖಾಯಂ ಮಾಡುತ್ತಿದ್ದೇವೆ ಅದು ಹೋಗಿ ಇನ್ನು 176 ಬಾಕಿ ಇದೆ ಎಂದು ಹೇಳಿದರಲ್ಲ.

ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ : ಹುದ್ದೆಗಳ ಮಂಜೂರಾತಿ ಬಗ್ಗೆ ನಾನು ಕೇಳುತ್ತಿರುವುದು.

ಶ್ರೀ ಬಿ.ಎನ್. ಬಚ್ಚೇಗೌಡ : 176 ಹುದ್ದೆಗಳು ಬಾಕಿ ಇದೆ ಅದನ್ನು ನೇಮಕ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಪಡಿತರ ಚೀಟಿಯ ಮೂಲಕ ಸೀಮೆ ಎಣ್ಣೆಯ ವಿತರಣೆ

317 - ಶ್ರೀ ಕೆ.ಎನ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಪಡಿತರ ಚೀಟಿಯ ಮೂಲಕ ವಿತರಿಸುವ ವ್ಯವಸ್ಥೆಯಲ್ಲಿ ಸೀಮೆ ಎಣ್ಣೆಯ ಬಗ್ಗೆ ಹಳ್ಳಿ ಮತ್ತು ಪಟ್ಟಣಗಳಲ್ಲಿ ವ್ಯತ್ಯಾಸವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?

ಇ) ಗ್ರಾಮಾಂತರ ಪ್ರದೇಶದ ಕೃಷಿ ಕಾರ್ಮಿಕರಿಗೆ ಕನಿಷ್ಠ 10 ಲೀಟರ್ ಸೀಮೆಎಣ್ಣೆ ವಿತರಿಸಲು ಸರ್ಕಾರದವರು ಪರಿಶೀಲಿಸುವರೆ?

ಶ್ರೀ ಎನ್. ನಂಜಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ಹೌದು

ಆ) ಸಾಮಾನ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಕಟ್ಟಿಗೆ, ಬೆರಣಿ ಇತ್ಯಾದಿ ಉರುವಲು ದೊರೆಯುವುದರಿಂದ, ಸೀಮೆಎಣ್ಣೆ ಬೆಡಿಕೆ ಕಡಿಮೆ ಇರುತ್ತದೆ. ಆದರೆ ಪಟ್ಟಣ ಪ್ರದೇಶದಲ್ಲಿ ಇವುಗಳು ಲಭ್ಯವಿಲ್ಲದಿರುವುದರಿಂದ ಬೇಡಿಕೆ ಹೆಚ್ಚಾಗಿರುತ್ತದೆ. ಈ ಮೇರೆಗೆ ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶದ ಕಾರ್ಡುದಾರರಿಗೆ ವಿತರಣೆಯಲ್ಲಿ ವ್ಯತ್ಯಾವಿರುವುದು ಅನಿವಾರ್ಯವಾಗಿರುತ್ತದೆ. ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಇದು ಹಿಂದಿನಿಂದಲೂ ಜಾರಿಯಲ್ಲಿರುತ್ತದೆ.

ಇ) ಇದನ್ನು ಪರಿಶೀಲಿಸಲಾಗುವುದು.

ಶ್ರೀ ಕೆ.ಎನ್. ಪುಟ್ಟಣ್ಣಯ್ಯ : ಬೆರಣಿ ಕಟ್ಟಿಗೆ ಉಪಯೋಗ ಹಳ್ಳಿಯಲ್ಲಿ ಜಾಸ್ತಿ ಇದೆ. ತೊಪ್ಪೆಯನ್ನು ನಾವು ಬೇರೆ ದೇಶದಿಂದ ತರಿಸಿಕೊಳ್ಳುತ್ತಿದ್ದೇವೆ. ಭಾರತ ದೇಶದವರಾದ ನಾವು ತೊಪ್ಪೆಯನ್ನು ಬೇರೆ ದೇಶದಿಂದ ತರಿಸಿಕೊಳ್ಳುವ ಸ್ಥಿತಿಯಲ್ಲಿ ಇದ್ದೇವೆ. ನಮ್ಮ ಹಳ್ಳಿಯ ಯಾವುದೇ ರಸ್ತೆಯಲ್ಲಿ ಡಾಂಬರೀಕರಣ ಇಲ್ಲದೆ ಪ್ರತಿಯೊಂದು ಮನೆಯವರೂ ಒಂದೂವರೆ, ಎರಡು ಕೆ.ಜಿ. ತೊಪ್ಪೆಯನ್ನು ಸಾರಿಸಿ ರಂಗೋಲಿ

ಇರುವುದಕ್ಕೆ ಉಪಯೋಗಿಸುತ್ತಾರೆ. ಬೆರಣಿಗೆ ಎಲ್ಲಿ ತೊಪ್ಪೆ ಇದೆ, ಬೆರಣಿಗೂ ಇಲ್ಲ, ಹೊಲಕ್ಕೂ ಗದ್ದಗೂ ಇಲ್ಲ, ಹಳ್ಳಿಯಲ್ಲಿರತಕ್ಕಂತಹವರಿಗೆ ಮತ್ತು ಪಟ್ಟಣದಲ್ಲಿರುವವರಿಗೆ ತಾರತಮ್ಯ ಏಕೆ ಮಾಡಬೇಕು.

ಅವರಿಗೆ ವಿದ್ಯುಚ್ಛಕ್ತಿ ಸರಬರಾಜು ಇಲ್ಲ, ನಂತರ ಗ್ಯಾಸ್‌ನ ಸರಬರಾಜು ಇಲ್ಲ, ಕಟ್ಟಿಗೆ ಸರಬರಾಜು ಇಲ್ಲ, ಅಂತಹ ಕೃಷಿ ಕಾರ್ಮಿಕರಿಗೆ ಸೀಮೆ ಎಣ್ಣೆಯನ್ನು ಏಕೆ ಹೆಚ್ಚುವರಿ ಕೊಡಬಾರದು? ಪಟ್ಟಣದಲ್ಲಿ ಗ್ಯಾಸ್ ಇರುವವರಿಗೆ 2 ಲೀಟರ್, ಗ್ಯಾಸ್ ಇಲ್ಲದಿರುವವರಿಗೆ 15 ಲೀಟರ್ ಕೊಡುವುದು ಇದೆ. ಇದಕ್ಕೆ ನಮ್ಮದೇನೂ ಅಭ್ಯಂತರ ಇಲ್ಲ, ಗ್ರಾಮಾಂತರ ಪ್ರದೇಶದಲ್ಲಿನ ಕೃಷಿ ಕಾರ್ಮಿಕರಿಗೆ ತಾವೇಕೆ ಹೆಚ್ಚುವರಿ ಸೀಮೆ ಎಣ್ಣೆ ಕೊಡಬಾರದು. ಒಂದು ಒಂದೂ ಕಾಲು ಲೀಟರ್ ಸೀಮೆ ಎಣ್ಣೆಯನ್ನು ನ್ಯಾಯ ಬೆಲೆ ಅಂಗಡಿ ಮೂಲಕ ಕೊಡುತ್ತಾರೆ. ಅದರಲ್ಲೂ ಈ ನ್ಯಾಯ ಬೆಲೆ ಅಂಗಡಿಗಳು ಹದ್ದುಮೀರಿ ಹೋಗುತ್ತಿವೆ, ಅದನ್ನು ನಿಯಂತ್ರಣ ಮಾಡಿ, ಒಂದು ಕಾಲು ಲೀಟರ್ ತಲುಪುವುದೇ ಕಷ್ಟ. ಆದ್ದರಿಂದ ಕನಿಷ್ಠ 5 ಲೀಟರ್ ಅನ್ನು ಕೃಷಿ ಕಾರ್ಮಿಕರಿಗೆ ಕೊಡುವ ವ್ಯವಸ್ಥೆ ಮಾಡಿದರೆ ಅನುಕೂಲವಾಗುತ್ತದೆ. ಜನರ ಬವಣೆಯನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಹಳ್ಳಿಗೆ ಹೋದಾಗ ಅವರ ಬವಣೆ ನೋಡಿ. ಅದನ್ನು ಅರ್ಥ ಮಾಡಿಕೊಂಡು ಇದರ ಬಗ್ಗೆ ಸರಕಾರ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಸಭಾಧ್ಯಕ್ಷರ ಮೂಲಕ ಸರಕಾರವನ್ನು ವಿನಂತಿಸುತ್ತೇನೆ.

ಡಾ॥ ಎಸ್. ನಂಜಪ್ಪ : ಮಾನ್ಯ ಪುಟ್ಟಣ್ಣಯ್ಯನವರ ಕಳಕಳಿಯನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ, ಅವರ ಈ ಮನವಿಯನ್ನು ನಾನು ಮೆಚ್ಚಿಕೊಂಡಿದ್ದೇನೆ. ಗ್ರಾಮಾಂತರ ಪ್ರದೇಶಕ್ಕೂ ಮತ್ತು ಪಟ್ಟಣ ಪ್ರದೇಶಕ್ಕೂ ಸೀಮೆ ಎಣ್ಣೆ ವಿತರಣೆಯಲ್ಲಿ ಆಗುತ್ತಿರತಕ್ಕಂತಹ ವ್ಯತ್ಯಾಸವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಈಗಾಗಲೇ ತಂದಿದ್ದೇನೆ. ಅವರು ಕೇಂದ್ರ ಸರಕಾರಕ್ಕೆ ಪತ್ರ ಬರೆದಿದ್ದಾರೆ. ಕೇಂದ್ರ ಆಹಾರ ಸಚಿವರನ್ನು ಸಹ ಭೇಟಿ ಮಾಡಿ ಹೆಚ್ಚುವರಿ ಸೀಮೆ ಎಣ್ಣೆಯನ್ನು ಕೊಡಲಿಕ್ಕೆ ಒತ್ತಾಯ ಮಾಡಿದ್ದಾರೆ. ಈಗಾಗಲೇ ಆಜ್ಞೆ ಆಗಿದೆ. 10,500 ಕಿ.ಎಲ್. ಅನ್ನು ಪ್ರತಿ ತಿಂಗಳು ಹೆಚ್ಚು ಸೀಮೆ ಎಣ್ಣೆ ಕೊಡಬೇಕೆಂದು ಆಜ್ಞೆ ಆಗಿದೆ. ಅವರು ಒಪ್ಪಿಕೊಂಡಿದ್ದಾರೆ. ಅವರು ಹೆಚ್ಚುವರಿ ಸೀಮೆ ಎಣ್ಣೆ ಕೊಟ್ಟಾಗ ಗ್ರಾಮಾಂತರ ಪ್ರದೇಶಗಳಿಗೆ ಹಂಚಿಕೆ ಮಾಡುತ್ತೇವೆ. ಗ್ರಾಮಾಂತರ ಪ್ರದೇಶದಲ್ಲಿನ ಪ್ರತಿ ಕಾರ್ಡುಗಾರರಿಗೆ 5 ಲೀಟರ್ ಸೀಮೆ ಎಣ್ಣೆ ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳ ಅಭಿಲಾಷೆ ಇದೆ. ಕೇಂದ್ರ ಸರಕಾರದಿಂದ ಹೆಚ್ಚುವರಿ ಸೀಮೆ ಎಣ್ಣೆ ಬಂದಾಗ ಇಲ್ಲಿ ಹೆಚ್ಚುವರಿ ಮಾಡಲಿಕ್ಕೆ ನಾವು ಸರ್ವಥಾ ಪ್ರಯತ್ನ ಮಾಡುತ್ತೇವೆ. ಪಟ್ಟಣ ಪ್ರದೇಸದಲ್ಲಿ ಗ್ಯಾಸ್ ಎಚ್‌ಪಿಚ್ ಸೌಲಭ್ಯವಿರುವವರಿಗೆ ಸೀಮೆ ಎಣ್ಣೆ ವಿತರಣೆ ಕಡಿಮೆ ಮಾಡಿ ಅಂದರೆ 2 ಲೀಟರ್ ಕೊಡುವ ವ್ಯವಸ್ಥೆ ಮಾಡುತ್ತೇವೆ. ಇದನ್ನು ಹಳ್ಳಿಗಾಡಿಗೆ ಹೆಚ್ಚಾಗಿ ತೆಗೆದುಕೊಂಡು ಹೋಗಿ ಸದ್ಯಕ್ಕೆ 4 ಲೀಟರ್ ಕೊಡುವ ವ್ಯವಸ್ಥೆ ಮಾಡಬೇಕೆಂದಿದ್ದೇವೆ. ಈ ಹೆಚ್ಚುವರಿ ಸೀಮೆ ಎಣ್ಣೆ ಕೇಂದ್ರದಿಂದ ಬರದಿದ್ದರೂ ಕೂಡ ಗ್ರಾಮಾಂತರ ಪ್ರದೇಶದವರಿಗೆ 4 ಲೀಟರ್ ಆದರೂ ಕೊಡಬೇಕೆಂಬ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಈ ವ್ಯತ್ಯಾಸವನ್ನು ಆದಷ್ಟು ಬೇಗ ಸರಿಪಡಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ.

1.00 ಪಿ.ಎಂ

Sri Qumurlal Islam : Sir, the Hon'ble Minister has stated that in the rural areas because of availability of wood, the kerosene quota has been scaled down whereas in the Urban areas there is discrimination between one city and the other. In Bangalore you have fixed 13 litres per month whereas in

Gulbarga City you have fixed 10 litres per month through PDS the kerosene quota. I would like to know from the Government why this discrimination between the urban areas. Will the government take steps to correct this? ಏತಕ್ಕೆ ಬೆಂಗಳೂರಿಗೆ ಮತ್ತು ಮೈಸೂರಿಗೆ ಹೆಚ್ಚಿಗೆ ಕೊಟ್ಟಿದ್ದೀರಿ?

ಅಧ್ಯಕ್ಷರು : ಸರಿಪಡಿಸುತ್ತೇವೆ ಎಂದು ಹೇಳಿ. ಅವರಿಗೆ ಇಂಗ್ಲೀಷ್‌ನಲ್ಲಿ ಹೇಳಿ.

ಶ್ರೀ ಎಸ್. ನಂಜಪ್ಪ : ಮಾನ್ಯ ಅಧ್ಯಕ್ಷರೇ, ಇದು ಹಿಂದಿನಿಂದಲೂ ಬಂದಿದೆ. ಇದನ್ನು ಸರಿಪಡಿಸುವುದಕ್ಕೆ ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತೇನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ದಿನಾಂಕ : 7ನೇ ಆಗಸ್ಟ್ 1995ರ ಲಿಖಿತ ಮೂಲಕ ಉತ್ತರಿಸುವ ಮೊದಲನೆಯ ಪಟ್ಟಿಯಲ್ಲಿರುವ 24 ಪ್ರಶ್ನೆಗಳ ಪೈಕಿ 20 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಗ್ರಾಮಾಂತರ ಪ್ರದೇಶಗಳಲ್ಲಿ ಶೌಚಾಲಯಗಳ ನಿರ್ಮಾಣ

315 - ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ)

ಗ್ರಾಮಾಂತರ ಪ್ರದೇಶಗಳಲ್ಲಿ ಶೌಚಾಲಯ ನಿರ್ಮಾಣಕ್ಕೆ ಬೇಕಾಗುವ ಸಲಕರಣೆಗಳನ್ನು ಒದಗಿಸಲು ಸರ್ಕಾರದವರು ಮಾಡಿರುವ ವ್ಯವಸ್ಥೆಗಳೇನು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು):

ಅ) ಗ್ರಾಮಾಂತರ ಪ್ರದೇಶಗಳಲ್ಲಿ ಶೌಚಾಲಯ ನಿರ್ಮಾಣಕ್ಕೆ ಅಗತ್ಯವಿರುವ ಸಲಕರಣೆಗಳನ್ನು ಒದಗಿಸಲು ಗ್ರಾಮಾಂತರ ನೈರ್ಮಲ್ಯ ಮಾರಾಟ ಮಳಿಗೆಗಳನ್ನು ಪ್ರತಿಯೊಂದು ತಾಲ್ಲೂಕು ಮಟ್ಟದಲ್ಲೂ ಸ್ಥಾಪಿಸಲು ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸರ್ಕಾರದಿಂದ ನಿರ್ದೇಶನ ನೀಡಲಾಗಿದೆ. ಐದು ಜಿಲ್ಲೆಗಳಿಂದ ಅಂದರೆ ಬೆಂಗಳೂರು (ಗ್ರಾಮಾಂತರ) ಚಿಕ್ಕಮಗಳೂರು, ಶಿವಮೊಗ್ಗ, ಬಿಜಾಪುರ ಮತ್ತು ಹಾಸನ ಇವರಿಂದ ಪ್ರಸ್ತಾವನೆಗಳು ಬಂದಿರುತ್ತವೆ. ಸದರಿ ಐದು ಜಿಲ್ಲೆಗಳ ಆಯ್ದ 25 ತಾಲ್ಲೂಕುಗಳಲ್ಲಿ ಜುಲೈ 1995 ರಿಂದ ಜೂನ್ 1997ರ ಅವಧಿಯಲ್ಲಿ ಡಚ್ ಸರ್ಕಾರದ ಯೂನಿಸೆಫ್ ಮೂಲಕ ನೀಡುವ ಆರ್ಥಿಕ ಸಹಾಯದಿಂದ ಗ್ರಾಮಾಂತರ ನೈರ್ಮಲ್ಯ ಮಳಿಗೆಗಳನ್ನು ಸ್ಥಾಪಿಸಲು ರೂ. 88.00 ಲಕ್ಷ ಅಂದಾಜಿನ ಪ್ರಸ್ತಾವನೆಯೊಂದನ್ನು ಯೂನಿಸೆಫ್ ಕಛೇರಿಗೆ ಅನುಮೋದನೆಗೆ ಕಳಿಸಿದೆ.

ಕೋಲಾರದಲ್ಲಿ ಡೀಸಲ್ ಘಟಕ ಸಾಪನೆ

243- ಶ್ರೀ ಜಿ.ವಿ. ರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?